ತಿದ್ದುಪಡಿ ಮಾಡಿದ್ದು ಸಂಬಂಧಪಟ್ಟ ಕಲಂಗೆ ಇನ್ನು ಯಾವ ದಿನಾಂಕದಿಂದ ಜಾರಿಗೆ ಬರಬೇಕೆನ್ನುವುದಕ್ಕೆ ಆದೇಶ ಹೊರಡಿಸಬೇಕಾಗಿದ್ದು ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಈ ಮಾರುಕಟ್ಟೆ ಸಮಿತಿಯ ಉಳಿತಾಯ ಹಣದಿಂದ ಮಾರ್ಕೇಟ್ ಯಾರ್ಡ್‌ಗಳಿಗೆ ಸಂಪರ್ಕ ರಸ್ತೆಯನ್ನು ನಾವು ವ್ಯವಸ್ಥೆ ಮಾಡುತ್ತೇವೆ, ಅದಕ್ಕೆ ಸೂಕ್ತವಾಗಿರತಕ್ಕಂಥ ನಿಯಮಾವಳಿಗಳಿಗೆ ತಿದ್ದುಪಡಿ ತಂದಿದ್ದೇವೆಂದು ಹೇಳಿದ್ದಾರೆ. ಆ ತಿದ್ದುಪಡಿ ಆದೇಶ ಯಾವಾಗಿನಿಂದ ಜಾರಿಗೆ ಬರುತ್ತದೆ. ಆ ಆದೇಶದ ವಿವರಗಳು ಏನು? ಅದು ಅಲ್ಲದೆ ಈ ರಾಜ್ಯದ ಬೊಕ್ಕಸಕ್ಕೆ ಈ ಒಂದು ವ್ಯವಸಾಯ ಉತ್ಪನ್ನ ಮಾರುಕಟ್ಟೆಯಿಂದ ಎಷ್ಟು ಹಣ ಸಂದಾಯವಾಗುತ್ತದೆಂದು ನಾನು ಕೇಳಬಯಸುತ್ತೇನೆ.

ಶ್ರೀ ಮದನಗೋಪಾಲ ನಾಯಕ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಆತ್ಮಾನಂದರವರು ಕೇಳಿರತಕ್ಕಂಥ ಪ್ರಶ್ನೆ ಬೇರೆ. ಅವರು ಆದಾಯದ ಬಗ್ಗೆ ಕೇಳಿದ್ದಾರೆ. ಆ ಮಾಹಿತಿಯನ್ನು ನಾನುಎರಡು ಮೂರು ದಿವಸಗಳಲ್ಲಿ ಒದಗಿಸಿಕೊಡುತ್ತೇನೆ. ಇನ್ನು ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ, -ಸಂಪರ್ಕ ರಸ್ತೆಗಳನ್ನು ಮಾರುಕಟ್ಟೆ ಸಮಿತಿವತಿಯಿಂದ ಮಾಡಿ ಕೊಡಿ ಎಂದು ಕೇಳಿದ್ದಾರೆ. ಅಂದ್ರೆ ಕಾಯ್ದೆ 16 (63)ಕ್ಕೆ ತಿದ್ದುಪಡಿ ತಂದ ಮೇಲೆ ಮೊದಲು ಈ ರಸ್ತೆಗಳ ಬಗ್ಗೆ ಕೆಲವು ವ್ಯಾಪಾರಸ್ಥರು, ರೈತರು ಏನು ಹೇಳುತ್ತಾರೆ ಎಂದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಹೋದಾಗ ಅಲ್ಲಿ ಒಂದು ಡಿಸಿಷನ್ ಆಗಿದೆ.

ಹಳ್ಳಿಗಳಲ್ಲಿ ಬರತಕ್ಕಂಥ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿದ್ದು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ರಸ್ತೆಗಳಾಗಿರುವುದರಿಂದ ರೈತರ ಹಣ ವ್ಯಯ ಮಾಡತಕ್ಕಂಥಾದ್ದು ಸರಿ ಅಲ್ಲ ಎಂದು ಹೇಳಿ ಡಿಸಿಷನ್ ಕೊಟ್ಟ ಮೇಲೆ ನಾವು ಆ ರೀತಿಯ ಸಂಪರ್ಕ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಸಂಪರ್ಕ ರಸ್ತೆ ಅಂದ್ರೆ ಈಗ ಮಾರ್ಕೆಟ್ ಯಾರ್ಡ್‌ನಿಂದ ಮೈನ್ ರೋಡ್ ಆಗಲಿ ಮಾರ್ಕೆಟ್‌ಗೆ ಬರತಕ್ಕಂಥ ರಸ್ತೆಯಾಗಲಿ ಮೈನ್ ರೋಡ್‌ನಿಂದ ಮಾರುಕಟ್ಟೆಗೆ ಬರತಕ್ಕಂಥ ಸಂಪರ್ಕರಸ್ತೆ ಎಂದು ಏನು ಅಂತಾರೆ ಅದನ್ನು ಒದಗಿಸಿಕೊಡುವುದಕ್ಕೆ ಸಾಧ್ಯ ಇದೆ. ಅದರ ಪ್ರಕಾರ ಒಂದು ಕಿಲೋಮೀಟರ್ ಆಗಲಿ ಎರಡು ಕಿಲೋಮೀಟರ್ ಆಗಲಿ ಎಷ್ಟೇ ರಸ್ತೆ ಮೈನ್ ರೋಡ್‌ನಿದ ಮಾರ್ಕೆಟ್ ಯಾರ್ಡ್‌ಗೆ ಬರಲಿಕ್ಕೆ ಏನು ಅನುಕೂಲತೆ ಬೇಕು ರೈತರಿಗೆ ಅನುಕೂಲತೆ ಮಾಡಿ ಕೊಡಲಿಕ್ಕೆ ಅದಷ್ಟು ಬೇಗ ಮಾಡಿಕೊಡುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ಕಾಲ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಂಗಳೂರು ತೋಟಗಾರಿಕಾ ಅಭಿವೃದ್ಧಿ ಪ್ರಾಧಿಕಾರದ ರಚನೆ,

301- ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಒಟ್ಟು ಉದ್ಯಾನವನಗಳೆಷ್ಟು ?

ಆ) ಅವುಗಳ ಪೈಕಿ ಎಷ್ಟು ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿದೆ ಎಷ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ಕಾರದ ವಶದಲ್ಲಿದೆ?

ಇ) ಆ ಎಲ್ಲಾ ಉದ್ಯಾನವನಗಳನ್ನು ಹಾಗೂ ಇನ್ನೂ ಹಲವಾರು ಉದ್ಯಾನವನಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಬೆಂಗಳೂರು ತೋಟಗಾರಿಕಾ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು)

ಅ) 268

ಆ) ಉದ್ಯಾನ ವನಗಳ ವಿವರ :	ಸಂಖ್ಯೆ
ಅ) ಬೆಂಗಳೂರು ಮಹಾನಗರ ಪಾಲಿಕೆ	200
ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	48
ಇ) ಸರ್ಕಾರದ ತೋಟಗಾರಿಕೆ	20

ಇ) ಇಲ್ಲ.

ಬಾಲವಾಡಿ ಶಿಕ್ಷಕರುಗಳ ಸೇವೆಗಳನ್ನು ಖಾಯಂಗೊಳಿಸುವಿಕೆ

257 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುವ ಬಾಲವಾಡಿ ಶಿಕ್ಷಕಿಯರ ಸೇವೆಯನ್ನು ಸಕ್ರಮಗೊಳಿಸುವ ಪ್ರಸ್ತಾವನೆ ಸರ್ಕಾರದಲ್ಲಿ 9 ವರ್ಷಗಳಿಂದ ಬಾಕಿ ಇದೆಯೇ?*

ಆ) *ಇತರ ಜಿಲ್ಲೆಗಳಲ್ಲಿ ಬಾಲವಾಡಿ ಶಿಕ್ಷಕಿಯರ ಸೇವೆಯನ್ನು ಸಕ್ರಮಗೊಳಿಸಿ ಸರ್ಕಾರಿ ಆದೇಶ ಹೊರಡಿಸಲಾಗಿದೆಯೇ?*

ಇ) *ಚನ್ನಪಟ್ಟಣ ತಾಲ್ಲೂಕಿಗೆ ಸರ್ಕಾರಿ ಆದೇಶ ಅನ್ವಯವಾಗದೇ ಇರುವ ಕಾರಣಗಳು?*

ಈ) *ಅವರ ಸೇವೆಗಳನ್ನು ಯಾವಾಗ ಸಕ್ರಮಗೊಳಿಸಲಾಗುವುದು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಇಲ್ಲ.

ಆ) ಇಲ್ಲ. ಆದರೆ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬಾಲವಾಡಿ ಶಿಕ್ಷಕಿಯರ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ ಡಿಪಿಎಆರ್ 2 ಎಸ್ಎಲ್ಸಿ 90 ದಿನಾಂಕ 6.8.90ರನ್ವಯ ಸಕ್ರಮಗೊಳಿಸುವ ಬಗ್ಗೆ ಸ್ಪಷ್ಟೀಕರಣ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯೊಂದಿಗೆ ಸಮಾಲೋಚಿಸಿ, ಅಂಗನವಾಡಿಯರ ಸೇವೆಗಳನ್ನು ನಿರ್ವಹಿಸುವಂತೆ ಬಾಲವಾಡಿ ಶಿಕ್ಷಕರಸೇವೆಗಳನ್ನು ಆ ಇಲಾಖೆಗೆ ನೀಡುವಂತೆ ಕ್ರಮ ಜರುಗಿಸಲಾಗುವುದು.

ಕೊಳವೆ ಬಾವಿಗಳ ದುರಸ್ತಿ

306 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಜಿಲ್ಲೆ ನೆಲಮಂಗಲ ತಾಲ್ಲೂಕು ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗಕ್ಕೆ 1990 ರಿಂದ 1994 ಜನವರಿಯವರೆಗೆ ಅಭಿವೃದ್ಧಿ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಸರ್ಕಾರದಿಂದ ಬಿಡುಗಡೆಯಾಗಿದೆ. (ವರ್ಷವಾರು ಮಾಹಿತಿಯನ್ನು ನೀಡುವುದು)*

ಆ) *ಈ ಪೈಕಿ ಪ್ರತಿ ವರ್ಷ 3 ಹೋಬಳಿಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ. (ವರ್ಷವಾರು ಮಾಹಿತಿಯನ್ನು ನೀಡುವುದು)*